ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಉಪ್ಪು ನೀರಿನ ವಿಸ್ಮಯ ಹಕ್ಕಿಗಳ ದಿನಚರಿ

ನವೆಂಬರ್ ತಿಂಗಳಿಂದ ಫೆಬ್ರುವರಿವರೆಗೆ ಹಕ್ಕಿಗಳ ವಲಸೆ ನಡೆಯುತ್ತದೆ. ನಾನಾ ದೇಶಗಳ ಹಕ್ಕಿಗಳು ತಮ್ಮ ಆಹಾರ ಹುಡುಕಿಕೊಂಡು ಖಂಡಾಂತರಗಳ ದಾಟಿ ಬರುವ ಈ ಪ್ರಕ್ರಿಯೆ ರೋಚಕ ಎನಿಸುತ್ತದೆ. ಇವುಗಳ ಬೌದ್ಧಿಕ ತಿಳಿವಳಿಕೆ, ನೆನಪಿನ ಶಕ್ತಿ, ಇಂತಲ್ಲಿಗೇ ಇದೇ ಸಮಯದಲ್ಲಿ ಬರಬೇಕೆಂಬ ವಿವೇಕವೇ ಅಚ್ಚರಿ ಹುಟ್ಟಿಸುತ್ತದೆ.

ಬೆಳಕಾಗುವ ಮೊದಲೇ ಕುಂದಾಪುರದ ಆ ಸಮುದ್ರದ ದಂಡೆಗೆ ಹೋದೆವು. ನಮ್ಮನ್ನು ಕರೆದುಕೊಂಡು ಹೋಗುವ ಅಂಬಿಗ ಇನ್ನೂ ಬಂದಿರಲಿಲ್ಲ. ಸೂರ್ಯ ಮೂಡುವ ಬೆಳಕು ಸಣ್ಣಗೆ ಜಿನುಗುತ್ತಿತ್ತು. ಪಶ್ಚಿಮಘಟ್ಟದ ಕಾನನದಿಂದ ಸದ್ದಿಲ್ಲದೆ ಹರಿದು ಬರುವ ಪಂಚಗಂಗಾವಳಿ ನದಿ ತಣ್ಣಗೆ ಹರಿಯುತ್ತಿದ್ದಳು. ಅಲ್ಲಿ ದೂರದಲ್ಲಿ ಭೋರ್ಗರೆವ ಗಂಗೊಳ್ಳಿ ಬೀಚು ಒಂದೆರಡು ಕಿಲೋ ಮೀಟರ್ ದೂರದಲ್ಲಿ ಕಾಣುತ್ತಿದೆ. ನಾವು ಅಲ್ಲಿಯತನಕ ನಾಡನಾವೆಯಲ್ಲಿ ಹೋಗಬೇಕು.

ಕಣ್ಣೆದುರು ಹಿನ್ನೀರಿನ ಮೇಲೆ ನಾವಿಕರು ನಿಲ್ಲಿಸಿ ಹೋದ ದೋಣಿಗಳು ತೂಕಡಿಸುತ್ತಿವೆ. ಮೀನುಗಾರರು ಹೆಕ್ಕಿ ತಂದ ಕಪ್ಪೆ ಚಿಪ್ಪುಗಳ ರಾಶಿ ದಡದಲ್ಲಿ ಸುರಿದಿದ್ದಾರೆ. ಅಪ್ಪಿತಪ್ಪಿ ಅದರ ಮೇಲೆ ಬರಿಗಾಲಿಟ್ಟರೆ ಅವು ಚಾಕುವಿನಂತೆ ಕಾಲನ್ನು ಕೊಯ್ದು ಬಿಸಾಡಬಲ್ಲವು. ಹಿಂದೆ ಇದರ ಅನುಭವವಾಗಿ ಸಹವಾಸವೇ ಬೇಡವೆಂದು ಹೆದರಿ ದೂರವೇ ನಿಂತಿದ್ದೇವೆ. ಮೀನಿನ ಕಡು ವಾಸನೆ ನಮಗಂತೂ ಹೊಸತು. ಇಲ್ಲಿಯವರಿಗೆ ಇದು ಅಭ್ಯಾಸವೇ ಆಗಿ ಹೋಗಿದೆ.

ನೀರ ನಡುವೆ ಅಲ್ಲಲ್ಲಿ ಕಬ್ಬಿಣದ ಜಾಲಿ ಕಟ್ಟಿದ್ದಾರೆ. ಅವು ನೋಡಲು ಪುಟ್ಟ ಮನೆಗಳಂತೆ ಇವೆ. ಇದರ ಆಸರೆಯಲ್ಲಿ ಮೀಗುಂಲಿಗರು ಮೀನು ಸಾಕಾಣಿಕೆ ನಡೆಸುತ್ತಾರೆ. ಕಡಲಿನಲ್ಲಿ ಬಲೆಗೆ ಸಿಗುವ ಪುಡಿ ಮೀನುಗಳ ಹಿಡಿದು ತಂದು ಕತ್ತರಿಸಿ ಇದರೊಳಗೆ ಎಸೆಯುತ್ತಾರೆ. ಇದೊಂದು ತರಹ ನಾವೆಲ್ಲಾ ಅಕ್ವೇರಿಯಂನಲ್ಲಿ ಮತ್ಸ್ಯಗಳ ಸಲಹುವ ರೀತಿಯಲ್ಲಿದೆ. ನನ್ನ ಜತೆಗಿದ್ದ ಗೆಳೆಯ ಶ್ರೀಕಾಂತ್ ಅವರಿಗೆ ಕಡಲ ದೋಣಿ ಹತ್ತಿ ಫೋಟೊಗ್ರಫಿ ಮಾಡುವ ಮೊದಲ ಅನುಭವವಿದು. ಹೊಯ್ದಾಡುವ ದೋಣಿಯಲ್ಲಿ ಕೂತು ಚಿತ್ರ ಹೆಕ್ಕಲು ಅವರು ಹೆಚ್ಚು ಕಾತರರಾಗಿದ್ದಾರೆ. ಒಂದು ಬಗೆಯ ಕಾತರ, ಉತ್ಸಾಹದಲ್ಲಿ ಕಾಯುತ್ತಿದ್ದೇವೆ.

ನಾವು ನಿಂತಿದ್ದ ಕಡೆ ಜನರ ಓಡಾಟ ಹೆಚ್ಚಿರಲಿಲ್ಲ. ಕಳೆದ ವರ್ಷ ಬಂದಾಗ ಪಲ್ಯಕ್ಕೆಂದು ಕಪ್ಪೆಚಿಪ್ಪು ಕೊಳ್ಳುವ ಜನ ಮುಗಿಬಿದ್ದು ನಿಂತಿದ್ದನ್ನು ಕಂಡಿದ್ದೆ. ಈ ಸಲ ಯಾಕೋ ಅವರ ಸುಳಿವೂ ಕಾಣುತ್ತಿಲ್ಲ. ಸಮಯ ಇದ್ದ ಕಾರಣ ಶಾಂತವಾಗಿದ್ದ ಕಡಲನ್ನು ನೋಡುತ್ತಾ ಸುಮ್ಮನೆ ಕೂತೆವು. ನಾರಾಯಣ ಖಾರ್ವಿ ಯಾವಾಗಲೂ ಬರೋದೇ ಸ್ವಲ್ಪ ಲೇಟು. ಅವನ ಮನೆಯೂ